

ಮುತ್ತೈದೆ ಪೂಜೆ



ದೈವಕ್ಕೆ 'ಪರ್ವ' ಅರ್ಪಣೆ

ಆದರೆ ಈಗ ಶೀಘ್ರ ಬೆಳೆಯುವ ತಳಿಗಳು ಬಂದಿರುವುದರಿಂದ ಶ್ರೀಮಂತ–ಬಡ ಕೃಷಿಕರೆಂಬ ಭೇದವಿಲ್ಲ. ಕೃಷಿಯೇ ಸವಾಲಾಗಿರುವುದರಿಂದ ಹಬ್ಬಗಳು ಆಧುನಿಕಗೊಂಡು ಪೇಟೆ ಶೈಲಿಗೆ ಮುಖ ಮಾಡಿವೆ.

ಹಿಂದೆಲ್ಲ ಜೋಗಿಯ ವೇಷ ಧರಿಸಿ ಸೋಣಜೋಗಿ ಎಂಬಾತ ಮನೆಮನೆಗೆ ಬಂದು ಮಾರಿ ಕಳೆಯುವ ರೂಢಿಯೂ ಇತ್ತು. ಇತ್ತೀಚೆಗೆ ಅದು ಮಾಯವಾಗಿದೆ. ಆದರೆ ಪ್ರತೀ ಶನಿವಾರ ಮನೆಯಲ್ಲಿ ದೇವರ ಪೂಜೆ ಮಾಡಿ ಮಡಿಯಿಂದ ಊಟ ಮಾಡುವುದು, ನಿರ್ದಿಷ್ಟ ದೈವಗಳಿಗೆ ಸೋಣ ನಡಾವಳಿ ಸೇವೆ ಅರ್ಪಿಸುವುದು ಈಗಲೂ ನಡೆಯುತ್ತದೆ. ಇದನ್ನು ಧರ್ಮನಡಾವಳಿ ಎನ್ನುವುದುಂಟು.

ವಾಮನ ದೇವರು ಪಾತಾಳಕ್ಕೆ ತಳ್ಳಿದ ಬಲೀಂದ್ರನನ್ನು ತುಳುವರು ಬಲೀಂದ್ರ ದೇವರೆಂದೇ ಕರೆಯುತ್ತಾರೆ. ಸೋಣದ ಹುಣ್ಣಿಮೆಯಂದು ಭೂಮಿಯ ಚಂದ ನೋಡಲು ಬಲೀಂದ್ರ ದೇವರು ಬರುತ್ತಾರೆ ಎಂಬ ನಂಬಿಕೆಯೂ ತುಳುವರಲ್ಲಿದೆ. ಅಂದು ಸಂಜೆ ದೈವದ ಚಾವಡಿಯಲ್ಲಿ ದೀಪವಿಟ್ಟು ಪ್ರಾರ್ಥನೆ ಸಲ್ಲಿಸುವ ಆಚರಣೆಯೂ ಕೆಲವೆಡೆ ಇದೆ.

ಹಾಗಂತ ಕರಾವಳಿ ಚಾಂದ್ರಮಾನ ಆಚರಣೆಯೇ ಇಲ್ಲವೆಂದಲ್ಲ. ಗೌಡಸಾರಸ್ವತ ಬ್ರಾಹ್ಮಣರು ಶ್ರಾವಣ ಮಾಸವನ್ನೇ ಬಹಳ ಮುತುವರ್ಜಿಯಿಂದ ಆಚರಿಸುತ್ತಾರೆ. ಬಗೆಬಗೆಯ ಹೂವುಗಳು ಮತ್ತು ಜರಿಗಿಡಗಳನ್ನು ಆಯ್ದು 'ಚೂಡಿ' ಎಂಬ ಗುಚ್ಛವನ್ನು ಕಟ್ಟಿ ಹೊಸ್ತಿಲು ಪೂಜೆ ಮಾಡಿ ಮುತ್ತೈದೆಯರನ್ನು ಕರೆದು ಗೌರವಿಸುವುದು ಈಗಲೂ ಸಂಭ್ರಮದಿಂದ ನಡೆಯುತ್ತದೆ. ಈ ಆಚರಣೆಯನ್ನು ವಿಶ್ವಕರ್ಮ ಬ್ರಾಹ್ಮಣರೂ ಮಾಡುವುದುಂಟು.

ಹಾಗೆ ನೋಡಿದರೆ ಹೊಸ್ತಿಲು ಪೂಜೆ ಸೋಣ ಮತ್ತು ಶ್ರಾವಣದ ಮುಖ್ಯ ಅಂಗವೇ. 'ಹೊನ್ನ ಹೊಸ್ತಿಲಿಗೆ ಚಿನ್ನದ ಗಿಂಡಿಲಿ ನೀರು ತರುವೆ, ಕುಂತಿ ದೇವಿಯಷ್ಟು ಮಕ್ಕಳು, ಸಾವಿತ್ರಿ ದೇವಿಯಷ್ಟು ಮುತ್ತೈದೆ ಭಾಗ್ಯ, ಲಕ್ಷ್ಮೀದೇವಿಯಷ್ಟು ಐಶ್ವರ್ಯವನ್ನು ಕೊಡು' ಎಂದು ಕೋರುವ ಹೊಸ್ತಿಲು ಪೂಜೆಗೆ ಹೆಚ್ಚು ಮಹತ್ವ. ಬ್ರಾಹ್ಮಣರ ಮನೆಗಳಲ್ಲಿ ಸಿಂಹ ಸಂಕ್ರಾಂತಿಯಂದು ಹೊಸ್ತಿಲು ಪೂಜೆಗಾಗಿ ಮೂರು ದಿನ ಮೊದಲೇ ಅಂಕುರ ಹಾಕುತ್ತಾರೆ. ಹೆಸರು, ಹುರುಳಿ ಕಾಳುಗಳನ್ನು ಹಸಿಮಣ್ಣಿನ ಮೇಲೆ ಹರಡಿ, ಅದಕ್ಕೆ ಮಡಿಕೆ ಬೋರಲು ಹಾಕಿದರೆ, ಮೂರು ದಿನಗಳಲ್ಲಿ ಅದು ಮೊಳಕೆಯೊಡೆದು ಹಳದಿ ಎಲೆಗಳನ್ನು ಅರಳಿಸಿ ನಿಂತಿರುತ್ತದೆ. ಹೊಸ್ತಿಲು ಪೂಜೆ ಮತ್ತು ಚೌತಿ ಹಬ್ಬಕ್ಕೆ ಇದೇ ಅಂಕುರ ವಿಶೇಷವಾದ ಹೂವು.

ತಂತ್ರಜ್ಞಾನ, ಆಧುನಿಕತೆ ಎಲ್ಲ ಸ್ಥಳೀಯ ಹಬ್ಬಗಳ ಮೇಲೆ ಪ್ರಭಾವ ಬೀರಿದೆ. ಸಾರ್ವಜನಿಕ ವರಮಹಾಲಕ್ಷ್ಮಿಯಂತಹ ಬೆಂಗಳೂರು ಹಬ್ಬಗಳು ಕರಾವಳಿಗೆ ಇಳಿದು ಬಂದಿವೆ. ಕೃಷಿ ಸವಕಳಿ ಆಗುತ್ತಿರುವಂತೆಯೇ ತುಳುವ ಸಂಸ್ಕೃತಿಯ ಆಚರಣೆಗಳು ಮರೆಗೆ ಸಂದಿವೆ.

■




ಪಂ||. ಎಸ್ ರಾಘವ ಜೋಷಿ
ಶ್ರೀ ಗುರು ರಾಘವೇಂದ್ರ ಸ್ವಾಮಿ ಆರಾಧಕರು

!ಉಚಿತ ಭವಿಷ್ಯ ಹೇಳುತ್ತಾರೆ!

ಬಹು ವರ್ಷಗಳಿಂದ ಜನರ ಪ್ರೀತಿ ವಿಶ್ವಾಸಗಳಿಸಿ ಫೋನಿನ ಮುಖಾಂತರ ಭವಿಷ್ಯವನ್ನು ಹೇಳುತ್ತಾರೆ.

ನಿಮ್ಮ ಜೀವನದ ಭವಿಷ್ಯ ತಿಳಿಸುತ್ತಾರೆ. ಗಂಡ–ಹೆಂಡತಿ ಕಿರಿಕಿರಿ, ಪ್ರೀತಿ–ಪ್ರೇಮ ವಿಚಾರ, ಶತೃಗಳಿಂದ ತೊಂದರೆ, ಸಂತಾನ ಭಾಗ್ಯ, ಸಾಲಬಾಧೆ, ಪ್ರಮೋಷನ್, ವಿದೇಶ ಪ್ರಯಾಣ, ಜಮೀನಿನ ವಿಚಾರದಂತಹ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿದ್ದರು ಕೆಲವೇ ದಿನಗಳಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.



ಸ್ಥಳ: ಎಸ್. ಬಿ. ಆರ್. ಕಾಂಪ್ಲೇಕ್ಸ್, ಕಾರ್ಪೂರೇಷನ್ ಬ್ಯಾಂಕ್ ಪಕ್ಕದಲ್ಲಿ,
ಹೊಸೂರು ಮುಖ್ಯ ರಸ್ತೆ, ಚಂದಾಪುರ, ಬೆಂಗಳೂರು–560081

ಎಷ್ಟೋ ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದದ್ದರೆ ಇವರನ್ನೇ ಸಂಪರ್ಕಿಸಿ.

ಇವರನ್ನು ಸಂಪರ್ಕಿಸಿ ಅಥವಾ ಭೇಟಿಮಾಡಿ 9845777511/ 9901173383